# ನನ್ನ ಓದು



## ಬಹುಮುಖಿ ಮೀರಾ

ಕೆ.ಆರ್. ಮೀರಾ ಸ್ತ್ರೀವಾದಿ ಸಂವೇದನೆಯ ಬರಹಗಾರ್ತಿ. ಅಂಕಣ ಬರಹ, ಚಿತ್ರಕತೆ, ಕಿರುಕತೆಗಳ ಮೂಲಕ ಜನಪ್ರಿಯರು. ಇವರ 'ಆವೇ ಮರಿಯ' ಎಂಬ ಕಿರುಕತೆಗೆ ಮತ್ತು 'ಆರಾಚರ್' ಎಂಬ ಕಾದಂಬರಿಗೆ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಓಡಕ್ಕುಳಲ್, ವಯಲಾರ್ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿರುವ ಪ್ರಮುಖ ಗೌರವಗಳು.

ಎನ್ನುವ ಪ್ರಶ್ನೆಯನ್ನು ಉಂಟುಮಾಡುವ, 'ಭಗವಾನ್ಡೆ ಮರಣಂ' ಕತೆಯ ಸಾಲುಗಳನ್ನು ಗಮನಿಸಬೇಕು. ''ಅವನು ಚಿತ್ತಚಾಂಚಲ್ಯವನ್ನು ನಿಯಂತ್ರಿಸಿ ಪ್ರೊಫೆಸರ್‌ನ ಹಾಲಿನಂತೆ ಬೆಳ್ಳಗಿರುವ ಹುಬ್ಬುಗಳ ನಡುವೆ ಗುರಿಯಿಟ್ಟು ಟ್ರಿಗರ್ ಒತ್ತಿದ. ಆದರೆ ಗನ್ ಅನ್ನು ನೋಡಿಯೂ ನೋಡದಂತೆ ಭಾವಿಸಿದ ಪ್ರೊಫೆಸರ್ ನಕ್ಕು – ಮಗನೇ, ಧರ್ಮವೆಂದರೆ ರಕ್ತವನ್ನು ಮಾತ್ರ ಕುಡಿಯುವ ಪ್ರಾಣಿ. ಕೆಳ ಜಾತಿಯವರ, ದುಡ್ಡಿಲ್ಲದವರ ಮತ್ತು ಅಧಿಕಾರವಿಲ್ಲದವರ ರಕ್ತವನ್ನು ಮಾತ್ರವೇ ಅದು ಕುಡಿಯುತ್ತದೆ. ನೀನು ದಲಿತ ಮಹಿಳೆಯನ್ನು ಮದುವೆಯಾದರೆ ನಿನ್ನ ಧರ್ಮವು ಅವಳ ರಕ್ತ ಕುಡಿಯುತ್ತದೆ. ಅದು ಬಿಟ್ಟು ಬ್ರಾಹ್ಮಣ ಮಹಿಳೆಯನ್ನು ವರಿಸಿದರೆ ಅದು ನಿನ್ನ ರಕ್ತವನ್ನು ಕುಡಿಯುತ್ತದೆ. ನಿನ್ನೆ ಬಸವಣ್ಣ, ಇವತ್ತು ನಾನು, ನಾಳೆ ನೀನು, ಕೂಡಲಸಂಗಮದೇವಾ!...''

'ಪ್ರೊಫೆಸರ್‌ರನ್ನು ಕೊಲ್ಲಲು ಹೋದ ದಿನ ಅದೇ ಮೊದಲ ಬಾರಿ 'ಅಮರ' ಬಸವಣ್ಣನ ವಚನವನ್ನು ಕೇಳಿದ್ದು' ಎಂಬ ಸಾಲಿನೊಂದಿಗೆ ಕತೆ ಆರಂಭವಾಗುತ್ತದೆ. ಕತೆಯ ಹೆಸರೇ ಹೇಳುವಂತೆ ಇದು ಭಗವಾನ್‌ನ ಕತೆ. ಬಸವಣ್ಣನ ತತ್ವಗಳ ಮೂಲಕ ಹಂತಕನನ್ನೂ ಭಗವಾನ್ ಆಗಿ ಪರಿವರ್ತಿಸುವ ಶಾಂತಿಯ ಕತೆ.

ಭಗವದ್ಗೀತೆಯನ್ನು ಸುಟ್ಟು ಹಾಕಬೇಕು ಎಂದು ಹೇಳಿಕೆ ನೀಡಿದ್ದ ಪ್ರೊಫೆಸರ್ ಅವರನ್ನು ಮುಗಿಸಲೇಬೇಕು ಎಂದು ಸಂಚು ಹೂಡಿದ ಮಲ್ಲಪ್ಪ, ಅಮರ ಎಂಬಾತನ್ನು ಆ ಕೆಲಸಕ್ಕಾಗಿ ನಿಯೋಜಿಸುತ್ತಾನೆ. ಆ ಕೃತ್ಯಕ್ಕೆ ಸೋಮವಾರ ಬ್ರಾಹ್ಮೀ ಮುಹೂರ್ತವನ್ನೇ ಆಯ್ಕೆ ಮಾಡಲಾಗುತ್ತದೆ. ಗುಂಡಿಕ್ಕಿ ಕೊಲ್ಲುವ ಮುನ್ನ ಎಡಗೈಯಿಂದ ಪ್ರೊಫೆಸರ್‌ನ ಕತ್ತು ಹಿಸುಕಲು ಪ್ರಯತ್ನಿಸಿದಾಗ ಅಲ್ಲಿದ್ದ ಮೂರು ಕಾಲಿನ ಏಣಿ ಬೀಳುವುದರ ಜತೆಗೆ ಕಪಾಟು ಬಿಲ್ಲಿನಂತೆ ಬಾಗಿ ಅಲ್ಲಿದ್ದ ಪುಸ್ತಕಗಳು ಬಾಣದಂತೆ ಮೈಮೇಲೆ ಬೀಳುತ್ತವೆ. ಹೀಗೆ ಬಿದ್ದ ಏಟಿಗೆ ಅಮರನ ಬಲಗೈ ಮತ್ತು ಕಾಲು ಮುರಿಯುತ್ತದೆ.

ಹಣೆಗೆ ಗುರಿಯಿಟ್ಟು ನಿಂತ ಹಂತಕನಿಗೆ ಕೊಂಚವೂ ಅಳುಕದೆ ಪ್ರೊಫೆಸರ್ ಬಸವಣ್ಣನ ವಚನ ಉದ್ಗರಿಸುತ್ತಾರೆ:

'ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ
ಆನೀ ಬಿಜ್ಜಳಂಗಂಜುವೆನೆ ಅಯ್ಯಾ
ಕೂಡಲಸಂಗಮದೇವ ನೀನು ಸರ್ವಜೀವ
ದಯಾಪಾರಿಯಾದ ಕಾರಣ ನಿನಗಂಜುವೆನಲ್ಲದೆ'